**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ತಿ.ನರಸೀಪುರ.**

**ಓ.ಎಸ್. ನಂಃ25/2012** **ಡಿ.ಡಬ್ಲ್ಯೂಃ 01**

ಸಾಕ್ಷಿಯನ್ನು ಇಂದು ದಿನಾಂಕಃ **09.09.2022** ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.

**ಪಾಟಿ ಸವಾಲುಃ** ವಾದಿ ಪರ ಶ್ರೀ **ಬಿ.ಎಂ.ಎನ್** ವಕೀಲರಿಂದಃ

ನಾನು ರಂಗನಾಥಪುರ ಗ್ರಾಮದಲ್ಲಿ ಹುಟ್ಟಿ ಬೆಳೆದಿರುತ್ತೇನೆ. ನನ್ನ ತಂದೆ-ತಾಯಿಗೆ 3 ಜನ ಹೆಣ್ಣು ಮಕ್ಕಳು, 4 ಜನ ಗಂಡು ಮಕ್ಕಳು ಇರುತ್ತಾರೆ. ನಾವು ಅಣ್ಣ-ತಮ್ಮಂದಿರು ಬೇರೆ ಬೇರೆಯಾಗಿ ವಾಸ ಮಾಡುತ್ತಿದ್ದೇವೆ. ನಾವು ಬೇರೆ ಬೇರೆ ವಾಸ ಮಾಡುತ್ತಾ ಸುಮಾರು 10 ವರ್ಷಗಳಾಗಿರುತ್ತದೆ.

1 ನೇ ವಾದಿ ನನ್ನ ಊರಿನವರು. ಸದರಿಯವರು ಈಗ ತೀರಿಕೊಂಡಿರುತ್ತಾರೆ ಎಂದರೆ ಸರಿ. 2 ನೇ ವಾದಿಯು ನಮ್ಮ ಊರಿನಲ್ಲಿ ವಾಸ ಮಾಡುತ್ತಿದ್ದಾನೆ ಎಂದರೆ ಸರಿ. 3 ನೇ ಪ್ರತಿವಾದಿ ನಮ್ಮ ಊರಿನವನು ಎಂದರೆ ಸರಿ.

ರಂಗನಾಥಪುರದ ಸರ್ವೇ ನಂ.62 ರಲ್ಲಿ ಒಟ್ಟು 5 ಎಕರೆ 17 ಗುಂಟೆ ಜಮೀನು ಇರುತ್ತದೆ ಎಂದರೆ ಸರಿ. **1978-79** ರಲ್ಲಿವಿಶೇಷ ಭೂಸ್ವಾಧೀನಾಧಿಕಾರಿಗಳು ಸದರಿ ಜಮೀನನ್ನು ಭೂಸ್ವಾಧೀನಪಡಿಸಿಕೊಂಡಿದ್ದರು ಎಂದರೆ ಸರಿಯಲ್ಲ. ಅದರನ್ವಯ ದಿನಾಂಕ **18.07.1986** ರಂದು ವಿಶೇಷಭೂಸ್ವಾಧೀನಾಧಿಕಾರಿಗಳು ಅಂತಿಮ ಅಧಿಸೂಚನೆಯ ಮೇರೆಗೆ ಸದರಿ ಜಮೀನಿನ ಸ್ವಾಧೀನವನ್ನು ವಶಕ್ಕೆ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ನಂತರ ತಿ.ನರಸೀಪುರದ ಕ್ಷೇತ್ರ ಅಭಿವೃದ್ಧಿ ಅಧಿಕಾರಿಗಳು ಸದರಿ ಜಮೀನಿನಲ್ಲಿ ನಿವೇಶನಗಳನ್ನು ಮಾಡಿ ರಂಗನಾಥಪುರ ಗ್ರಾಮದ ನಿವಾಸಿಗಳಿಗೆ ಹಂಚಿಕೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಅದರಂತೆ ದಾವಾ-1 ನೇ ಆಸ್ತಿಯನ್ನು 1 ನೇ ವಾದಿಗೆ, ದಾವಾ-2 ನೇ ಆಸ್ತಿಯನ್ನು 2 ನೇ ವಾದಿಯ ತಂದೆಗೆ ಹಾಗೂ ದಾವಾ-3 ನೇ ಆಸ್ತಿಯನ್ನು 3 ನೇ ವಾದಿಯ ತಂದೆಗೆ ಹಂಚಿಕೆ ಮಾಡಲಾಗಿತ್ತು ಎಂದರೆ ಸರಿಯಲ್ಲ. ಸದರಿ ಹಂಚಿಕೆಯ ಪ್ರಕಾರ ಸ್ವಾಧೀನವನ್ನು ಸದರಿಯವರಿಗೆ ಬಿಟ್ಟು ಕೊಟ್ಟಿದ್ದರು ಎಂದರೆ ಸರಿಯಲ್ಲ.

ನನಗೆ ಸರ್ವೇ ನಂ.62 ವಿಸ್ತೀರ್ಣ 5 ಎಕರೆ 17 ಗುಂಟೆ ಜಮೀನಿಗೆ ಚೆಕ್ಕು ಬಂದಿ ಗೊತ್ತಿರುವುದಿಲ್ಲ. ನನ್ನ ಜಮೀನಿನ ಸರ್ವೇ ನಂ.62 ಆಗಿದ್ದು, ಅದರ ವಿಸ್ತೀರ್ಣ ನನಗೆ ಗೊತ್ತಿರುವುದಿಲ್ಲ. ಅದರ ಚೆಕ್ಕಬಂಧಿ ಪೂರ್ವಕ್ಕೆ- ಮೈಸೂರು-ಮಳವಳ್ಳಿ ರಸ್ತೆ, ಪಶ್ಚಿಮಕ್ಕೆ- ಚಿಕ್ಕತಾಯಮ್ಮನ ಹಿತ್ತಲು, ಉತ್ತರಕ್ಕೆ-ರಸ್ತೆ, ದಕ್ಷಿಣಕ್ಕೆ-ಮಾದಶೆಟ್ಟಿ ಜಮೀನು ಇರುತ್ತದೆ. ಸರ್ವೇ ನಂ.62 ಭೂ ನ್ಯಾಯ ಮಂಡಳಿಯಿಂದ ನನ್ನ ತಾಯಿ ಹೆಸರಿಗೆ ಮಂಜೂರಾಗಿದ್ದು, ಯಾವಾಗ ಮಂಜೂರು ಆಗಿರುತ್ತದೆ ಎನ್ನುವುದು ನನಗೆ ಗೊತ್ತಿರುವುದಿಲ್ಲ.

ಸದರಿ ಭೂ ನ್ಯಾಯ ಮಂಡಳಿಗೆ ನನ್ನ ತಾಯಿ ಅರ್ಜಿ ನೀಡಿದ್ದು, ಸದರಿ ಅರ್ಜಿಯ ಪ್ರತಿಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಾನು ಸದರಿ ಅರ್ಜಿಯ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಭೂ ನ್ಯಾಯಮಂಡಳಿಯ ಮಂಜೂರಾತಿ ಆದೇಶವನ್ನು ಸಹ ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿಯ ಹೆಸರಿಗೆ ಭೂ ನ್ಯಾಯಮಂಡಳಿಯಿಂದ ಜಮೀನು ಮಂಜೂರು ಆಗಿಲ್ಲದ ಕಾರಣ ನಾನು ಸದರಿ ಆದೇಶವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

ನನ್ನ ತಾಯಿ ರಂಗನಾಥಪುರದ ಕುಳಯ್ಯ, ಲಕ್ಷ್ಮಯ್ಯ, ಮಹದೇವಮ್ಮ ಮತ್ತು ಲಕ್ಷ್ಮಮ್ಮ ರವರ ವಿರುದ್ಧ ದಾವೆ ದಾಖಲಿಸಿದ್ದರು. ಸದರಿ ದಾವೆಯು ಸರ್ವೇ ನಂ.62 ವಿಸ್ತೀರ್ಣ 1 ಎಕರೆ 24 ಗುಂಟೆಗೆ ಸಂಬಂಧಿಸಿರುತ್ತದೆ. ಸದರಿ ದಾವೆಯಲ್ಲಿ ಜಮೀನಿನ ಚೆಕ್ಕುಬಂದಿ ಏನು ನೀಡಿರುತ್ತೀರಿ ಎಂಬ ಪ್ರಶ್ನೆಗೆ ಸಾಕ್ಷಿಯು ಮೇಲೆ ತಿಳಿಸಿದ ಚೆಕ್ಕುಬಂದಿಯನ್ನು ನೀಡಿರುತ್ತೇವೆ ಎಂದು ನುಡಿಯುತ್ತಾರೆ. ಸದರಿ ದಾವೆಯನ್ನು ನನ್ನ ತಾಯಿಯವರು ಅಲ್ಲಿನ ಪ್ರತಿವಾದಿಗಳು ತೊಂದರೆ ನೀಡುತ್ತಿದ್ದರು ಎಂದು ಹಾಕಿರುತ್ತಾರೆ. ಸದರಿ ದಾವೆಯಲ್ಲಿ ಜಮೀನು ಭೂಸ್ವಾಧೀನ ಆಗಿರುವ ಬಗ್ಗೆ ನನ್ನ ತಾಯಿಗೆ ತಿಳಿಸಿದ್ದರು. ಸದರಿ ದಾವೆಯಲ್ಲಿ ಈ ದಾವೆಯ ವಾದಿಗಳನ್ನು ಪ್ರತಿವಾದಿಗಳನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ. ಸದರಿ ದಾವೆಯಲ್ಲಿ ನನ್ನ ತಾಯಿ ಸತ್ಯ ಸಂಗತಿಗಳನ್ನು ಮರೆಮಾಚಿ ನ್ಯಾಯಾಲಯದಿಂದ ಡಿಕ್ರಿ ಪಡೆದುಕೊಂಡಿದ್ದರು ಎಂದರೆ ಸರಿಯಲ್ಲ.

ರಂಗನಾಥಪುರದ ಗ್ರಾಮದ ನಿವೇಶನ ಸಂ.244 ಮತ್ತು 216 ಕ್ಕೆ ಸಂಬದಿಸಿದಂತೆ ನಿಮಗೆ ಹಕ್ಕು ಇರುತ್ತದೆಯೇ ಎಂದರೆ ಸಾಕ್ಷಿ ಇರುವುದಿಲ್ಲ ಎಂದು ನುಡಿಯುತ್ತಾರೆ. ಅದೇ ರೀತಿ ನಿವೇಶನ ಸಂ.245, 217, 270 ಮತ್ತು 243 ಕ್ಕೆ ನಿಮಗೆ ಹಕ್ಕು ಇರುತ್ತದೆಯೇ ಎಂದರೆ ಸಾಕ್ಷಿಯು ಬೇರೆಯವರ ನಿವೇಶನಕ್ಕೆ ನಮಗೆ ಹಕ್ಕು ಇರುವುದಿಲ್ಲ ಎಂದು ನುಡಿಯುತ್ತಾರೆ.

ನನ್ನ ತಾಯಿ ಪ್ರತಿವಾದ ಪತ್ರದಲ್ಲಿ ಬರೆಸಿರುವ ಅಂಶಗಳನ್ನು ನಾನು ಓದಿ ತಿಳಿದುಕೊಂಡಿರುವುದಿಲ್ಲ. ನನ್ನ ತಾಯಿ ತಮ್ಮ ಪ್ರತಿವಾದ ಪತ್ರದಲ್ಲಿ ಸರ್ವೇ ನಂ.62 ರಲ್ಲಿ 5 ಎಕರೆ 17 ಗುಂಟೆ ಇರುತ್ತದೆ ಎಂದು ಬರೆಸಿರುತ್ತಾರೆ ಎಂದರೆ ಸರಿ. ನಾನು ಭೂ ನ್ಯಾಯಮಂಡಳಿಯ ಪ್ರಕರಣ LRF No.5738/1975-76 dated02.06.1982 ರ ಆದೇಶವನ್ನು ಓದಿ ತಿಳಿದುಕೊಂಡಿರುತ್ತೇನೆ. ಸದರಿ ಪ್ರಕರಣದ ಆದೇಶವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಯಾವುದೇ ತೊಂದರೆ ಇರುವುದಿಲ್ಲ. ಸರ್ವೇ ನಂ.62 ಕ್ಕೆ ಸಂಬಂಧಿಸಿದಂತೆ ನನ್ನ ತಾಯಿಯವರ ಜೀವಿತವಾಧಿಯಲ್ಲಿ ಯಾವುದೇ ವಿಭಾಗ ಆಗಿರುವುದಿಲ್ಲ.

ಕುಳ್ಳಪ್ಪ ಎನ್ನುವವರು ಜೀವಂತ ಇರುತ್ತಾರೆ. ಸರ್ವೇ ನಂ.62 ರ ಪಹಣಿ ಪತ್ರಿಕೆಗಳನ್ನು ಓದಿಸಿ ತಿಳಿದುಕೊಂಡಿರುತ್ತೇನೆ. ವಾದಿಗಳು ನ್ಯಾಯಾಲಯಕ್ಕೆ ಸಲ್ಲಿಸಿರುವ ದಾಖಲೆಗಳನ್ನು ಓದಿಸಿ ತಿಳಿದುಕೊಂಡಿರುವುದಿಲ್ಲ. ವಾದಿಗಳು ಸಲ್ಲಿಸಿರುವ ದಾಖಲೆಗಳಿಗೆ ನನ್ನ ತಕರಾರು ಇರುತ್ತದೆ. ವಾದಿಗಳು ಸರ್ವೇ ನಂ.62 ನಿವೇಶನಗಳು ಆಗಿರುತ್ತವೆ ಎಂದು ಕೇಳಿರುತ್ತವೆ ಅದಕ್ಕೆ ನನ್ನ ತಕರಾರು ಇರುತ್ತದೆ. ವಾದಿಗಳು ದಾಖಲೆಗಳನ್ನು ಸೃಷ್ಟಿ ಮಾಡಿರುತ್ತಾರೆ ಎಂದು ತೋರಿಸಲು ನನ್ನ ಬಳಿ ಯಾವುದೇ ದಾಖಲೆ ಇರುವುದಿಲ್ಲ.

ನಾನು ವಿಧ್ಯಾಭ್ಯಾಸ ಮಾಡಿರುವುದಿಲ್ಲ. ವಾದಿಗಳು ಸಲ್ಲಿಸಿರುವ ನಿಪಿ-8 ದಾಖಲೆ ನನ್ನ ಗಮನಕ್ಕೆ ಇರುತ್ತದೆ. ಸದರಿ ದಾಖಲೆಗಳ ಪ್ರಕಾರ ನಿವೇಶನಗಳನ್ನು ಮಾಡಿ ಹಂಚಿಕೆ ಮಾಡಿರುತ್ತಾರೆ ಎಂದು ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ರಂಗನಾಥಪುರ ಗ್ರಾಮದ ನಿವಾಸಿಗಳಿಗೆ ಸರ್ವೇ ನಂ.62 ರಲ್ಲಿ ನೀಡಿರುವ ಫಲಾನುಭವಿಗಳ ಹೆಸರಿಗೆ ಖಾತೆ ಮಾಡಿಕೊಡಬೇಕೆಂದು ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಯವರು

ಆದೇಶ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ದಾಖಲೆಗೆ ಸಂಬಂಧಿಸಿದಂತೆ ನಿಪಿ-10 ರಂತೆ ಫಲಾನುಭವಿಗಳ ಪಟ್ಟಿಯಲ್ಲಿ1 ನೇ ವಾದಿ ಹಾಗೂ 2 ಮತ್ತು 3 ನೇ ವಾದಿಗಳ ತಂದೆಯವರು ಹೆಸರು ಇರುತ್ತದೆ ಎಂದರೆ ಸರಿಯಲ್ಲ.

ಸರ್ವೇ ನಂ.62 ರ ಮೂಲ ಮಾಲೀಕರು ದಿವಾನ ರಂಗಚಾರರವರ ಮಕ್ಕಳು ರಾಮಸ್ವಾಮಿ ಮತ್ತು ವರದರಾಜುರವರು ಆಗಿರುತ್ತಾರೆ. ದಾವಾ ಆಸ್ತಿಗಳನ್ನು ಅಳತೆ ಮಾಡಲು ನಾನು ಅರ್ಜಿ ಸಲ್ಲಿಸಿದ್ದ, ಸದರಿ ಅಳತೆಗೆ ಸಂಬಂಧಿಸಿದಂತೆ ನನಗೆ ಯಾವುದೇ ತಕರಾರು ಇರುವುದಿಲ್ಲ.

ಮುಂದುವರೆದ ಪಾಟೀ ಸವಾಲಿಗಾಗಿ ವಾದಿ ಪರ ವಕೀಲರು ಸಮಯ ಕೋರಿದ್ದು ಮುಂದೂಡಲಾಯಿತು.

ನನ್ನ ಹೇಳಿಕೆಯ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.

ಓ ಹೇ ಕೆ ಸರಿ ಇದೆ.

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,**

**ನ್ಯಾಯಾಲಯ ತಿ.ನರಸೀಪುರ.**